ದಿನಾಂಕ 20.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ಟಿ ಎನ್ ಎಸ್ ವಕೀಲರಿಂದಃ**

ಸಿಸಿ 966/2023 ಪ್ರಕರಣವನ್ನು ಅರ್ಜಿದಾರರ ಮಗ ಅರ್ಜಿದಾರನಿಗೆ ಹೊಡೆದಿದ್ದಾನೆ ಎಂದು ಹಲ್ಲೆಯ ಪ್ರಕರಣ ನೋಂದಾಯಿಸಿದ್ದು ಅದರಲ್ಲಿ 2 ನೇ ಆರೋಪಿ ಎಂದರೆ ಸರಿ. ಅರ್ಜಿದಾರರು ಮತ್ತು ಎದುರುದಾರರು ನನ್ನ ದೂರದ ಸಂಬಂಧಿಕರು. ಅರ್ಜಿದಾರರು ಮತ್ತು ಎದುರುದಾರರು ಪರಸ್ಪರ ಹೋಂದಾಣಿಕೆಯಿಲ್ಲದೆ 2023 ರಿಂದ ಕಿತ್ತಾಡಿಕೊಳ್ಳುತ್ತಿದ್ದಾರೆ. ಅದಕ್ಕೂ ಮೊದಲು ನಾನು ಅವರ ಮನೆಗೆಲ್ಲ ಹೋಗುತ್ತಿದ್ದೆ. ಅವರು ಚೆನ್ನಾಗಿದ್ದರು. ಅರ್ಜಿದಾರರು ರಾತ್ರಿ 3-4 ಗಂಟೆ ಸಮಯಕ್ಕೆ ತಡವಾಗಿ ಮನೆಗೆ ಬರುತ್ತಾರೆ ಎಂದು ಗಲಾಟೆ ಆಗುತ್ತಿತ್ತು. ಅದನ್ನು ಬಿಟ್ಟರೇ ಬೇರೆ ಯಾವುದೇ ಗಲಾಟೆ ನಡೆಯುತ್ತಿರಲಿಲ್ಲ. ಬೇರೆ ಯಾವುದೇ ವಿಚಾರವನ್ನು ಅವರಿಬ್ಬರು ನನಗೆ ತಿಳಿಸಿಲ್ಲ. ಎರಡು ಮೂರು ಬಾರಿ ನಾನು ಪಂಚಾಯತಿ ಮಾಡಿದ್ದೇನೆ. 2022 ರಲ್ಲಿ ಆ ರೀತಿ ಪಂಚಾಯತಿ ಆಗಿದೆ. ನಾನು ಮತ್ತು ಸಾಕ್ಷಿ ನಾರಾಯಣಸ್ವಾಮಿ ಮತ್ತು 10 ರಿಂದ 15 ಜನ ಸೇರಿ ಪಂಚಾಯತ ಮಾಡಿದ್ದೇವೆ. ನನ್ನ ಮೇಲೆ ಕೇಸ ಆಗುವ ಮೊದಲು ಆ ರೀತಿ ಪಂಚಾಯತಿ ಮಾಡಿದ್ದೇನೆ. ಅರ್ಜಿದಾರರಿಗೆ ಇಬ್ಬರು ಮಕ್ಕಳಿದ್ದಾರೆ. ಒಬ್ಬ ಯಶವಂತ್ ಇನೊಬ್ಬರ ಹೆಸರು ಗೊತ್ತಿಲ್ಲ.

ಎದುರುದಾರಳ ಮನೆ ಕೊಂಡುಕೊಂಡಿರುವ ಮನೆ ನಾನು ನೋಡಿದ್ದೇನೆ. ಸದರಿ ಮನೆಯಲ್ಲಿ ಅರ್ಜಿದಾರ ಮಂಜುನಾಥ ಮತ್ತು ಅವರು ಮಕ್ಕಳು ಇದ್ದಾರೆ. ಎದುರುದಾರರ ಹೆಸರಿನಲ್ಲಿ ಸದರಿ ಮನೆ ನೋಂದಣಿ ಆಗಿದೆ ಎಂದರೆ ಸರಿ. ಎದುರುದಾರ ನೋಂದಣಿಯಾಗಿವ ಮನೆ ನನಗೆ ಗೊತ್ತಿದೆ ಆದರೆ ಬೇರೆ ಮನೆ ನನಗೆ ಗೊತ್ತಿಲ್ಲ. ಅರ್ಜಿದಾರರು ಮತ್ತು ಎದುರುದಾರರು ತುಂಬಾ ವರ್ಷಗಳಿಂದ ಕಿತ್ತಾಡಿಕೊಂಡು ಪರಸ್ಪರ ಜೀವನ ಮಾಡದೇ ಇರುವ ವಿಚಾರ ಗೊತ್ತಿದ್ದೀಯಾ ಎಂದರೆ ಸಾಕ್ಷಿಯು ಅವರು ಇತ್ತೀಚಿಗೆ ಕಿತ್ತಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 2022 ರಲ್ಲಿ ಮೊದಲನೇ ಸಾರಿ ವರದಕ್ಷಿಣೆ ಕೇಳಿದ್ದಾರೆ. ಅವರು ವರದಕ್ಷಿಣೆಯನ್ನು ಕೇಳಿಲ್ಲ, ಅವರು ಪರಸ್ಪರ ಹೊಂದಾಣಿಕೆ ಇಲ್ಲ ಎನ್ನುವ ವಿಚಾರ ನನಗೆ ತಿಳಿದಿದೆ ಎಂದರೆ ಸರಿಯಲ್ಲ. ಎದುರುದಾರರ ತಮ್ಮ ಹಲವಾರು ವರ್ಷಗಳಿಂದ ನನಗೆ ಪರಿಚಯ. ಅವರು ರಾಜ್ಯ ಡಿಎಸ್ ಎಸ್ ಅಧ್ಯಕ್ಷ ಎಂದರೆ ಸರಿ. ಅವರ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.